ಕೂಡಲೇ ಆ ವ್ಯಕ್ತಿ ಕ್ಲೋರೋಫಾರಂನಂತಹ ಯಾವುದೋ ದ್ರಾವಣವನ್ನು ಸಿಂಪಡಿಸಿದ ಕರವಸ್ತ್ರವನ್ನು ಮೂಗಿನ ಬಳಿ ಹಿಡಿದಾಗ ತನಗೆ ಪ್ರಜ್ಞೆ ತಪ್ಪಿತ್ತು. ಮತ್ತೇನಾಯಿತೋ ತಿಳಿಯಲಿಲ್ಲ. ಈಗ ನೋಡಿದರೆ ತಾನು ನೆಲಮಾಳಿಗೆಯಲ್ಲಿದ್ದೇನೆ....

ಋತು ಸುತ್ತಲೂ ನೋಡಿದಳು. ಮೂಲೆಯಲ್ಲಿ ಹೇಮಲತಾ ಅವಳನ್ನೇ ಬೆದರು ನೋಟದಿಂದ ನೋಡುತ್ತಾ ಕುಳಿತಿರುವುದು ಕಂಡಿತು. ಅಂದರೆ....ತಾಯಿಯನ್ನು ಬಂಧಿಸಿರುವ ಜಾಗದಲ್ಲೇ ತನ್ನನ್ನೂ ಬಂಧಿಸಲಾಗಿದೆ. ಅವಳ ಕಣ್ಮುಂದೆ ಈಗ ಕಿಟಕಿಯ ದಪ್ಪ ಸರಳುಗಳು ಕಾಣತೊಡಗಿದವು. ಇಡೀ ಕೋಣೆಯ ತುಂಬಾ ಪ್ರಾಣಿಗಳನ್ನು ಬಂಧಿಸಿಡುವ ಕೇಜ್‌ಗಳಲ್ಲಿ ಬರುವಂತಹ ದುರ್ವಾಸನೆ. ಅವಳಿಗೆ ಒಂದು ಕ್ಷಣ ವಾಕರಿಕೆ ಬಂದಂತಾಯಿತು. ಹೌದಲ್ಲವೇ?....ಮನುಷ್ಯನೂ ಒಂದು ಪ್ರಾಣಿಯೇ. ಕಾಲ ಕಾಲಕ್ಕೆ ಸ್ನಾನ ಮಾಡುತ್ತಾ, ಶುಚಿಯಾದ ಬಟ್ಟೆ ಬರೆ ತೊಟ್ಟುಕೊಂಡರೆ ಅವನು ಮನುಷ್ಯ....ಇಲ್ಲದಿದ್ದರೆ ಪ್ರಾಣಿಯೇ. ತಾಯಿಯನ್ನು 20 ವರ್ಷಗಳ ಕಾಲ ಇಲ್ಲಿ ಬಂಧಿಸಿಡಲಾಗಿದೆ. ಅವಳಿಗೆ ಕಾಲಕಾಲಕ್ಕೆ ಆರೈಕೆ ಮಾಡುವವರಾದರೂ ಯಾರಿದ್ದಾರೆ?....ಚಂದ್ರಪ್ಪ ದಂಪತಿಗಳು ಹೊಟ್ಟೆಗೆ ಕೊಟ್ಟು ಹೋದರೆ ಮುಗಿಯಿತು. ಮಾತು ಮರೆತು ಪ್ರಾಣಿಯಂತೆಯೇ ಬದುಕಿರುವ ತಾಯಿಯನ್ನು ನೋಡಿ ಋತುವಿನ ಕಂಗಳು ತುಂಬಿ ಬಂದವು.

ತನ್ನನ್ನು ಇಲ್ಲಿ ಬಂಧಿಸಿರುವವರು ಯಾರಿರಬಹುದು? ಈಗ ಯಾವ ಸಮಯವೆಂಬುದೂ ತಿಳಿಯುತ್ತಿಲ್ಲ. ಬೆಳಗಿನ ಜಾವವೇ ಚಂದ್ರಪ್ಪ ದಂಪತಿಯನ್ನು ಬಂಧಿಸುತ್ತೇವೆಂದು ಹೇಮಂತ ಹೇಳಿದ್ದಾನಲ್ಲ. ತಾನಿಲ್ಲಿ ಬಂಧಿಯಾಗಿರುವ ವಿಷಯ ಅವನಿಗಿನ್ನೂ ತಿಳಿದಿಲ್ಲವೇ?....

ಋತುವಿನ ಯೋಚನೆ ಹತ್ತಾರು ದಿಕ್ಕುಗಳಲ್ಲಿ ಸಾಗತೊಡಗಿತ್ತು. ಒಂದು ರೀತಿಯ ಗೊಂದಲ ಅವಳನ್ನು ಆವರಿಸುವ ಹೊತ್ತಿನಲ್ಲೇ ಯಾರೋ ಮೆಟ್ಟಿಲಿಳಿದು ಬರುವ ಸದ್ದಾಯಿತು.

ಹೆಜ್ಜೆ ಸದ್ದು ಕಿವಿಗೆ ಬೀಳತೊಡಗಿದಂತೆ ಋತುವಿಗೂ ಆತಂಕ ಕಡಿಮೆಯಾಗತೊಡಗಿತ್ತು. ಖಂಡಿತ ಹೇಮಂತನೇ ಬಂದಿರುತ್ತಾನೆ. ಚಂದ್ರಪ್ಪ, ಸುಂದರಿಯರನ್ನು ಬಂಧಿಸಿದ ಮೇಲೆ ತನ್ನ ತಾಯಿಯನ್ನು ಬಿಡುಗಡೆ ಮಾಡಲು ಇಲ್ಲಿಗೆ ಬರುತ್ತಿರಬಹುದು. ತಾಯಿಯ ಜೊತೆಯಲ್ಲೇ ತನ್ನನ್ನು ನೋಡಿದರೆ ಅವನಿಗಾಗುವ ಆಘಾತವನ್ನು ಅವಳು ಊಹಿಸಿದಳು. ಹೇಮಂತನನ್ನು ಎದುರುಗೊಳ್ಳಲು ಮನಸ್ಸು ಸಿದ್ಧವಾಗತೊಡಗಿತ್ತು.

ಟಾರ್ಚ್‌ನ ಪ್ರಖರ ಬೆಳಕನ್ನು ಬೀರುತ್ತಾ ವ್ಯಕ್ತಿಯೊಂದು ಸರಳಿನ ತೀರಾ ಸಮೀಪ ಬಂದು ನಿಂತಿತು. ಆ ವ್ಯಕ್ತಿಯನ್ನು ನೋಡಿ ಋತು ಆಶ್ಚರ್ಯಚಕಿತಳಾದಳು. ಹಾಗೆ ಬಂದ ವ್ಯಕ್ತಿ ಹೇಮಂತನಾಗಿರದೆ ಪುರುಷೋತ್ತಮರಾಗಿದ್ದರು.....!

‘ಪಪ್ಪ....ನೀವಾ?’ ಆಶ್ಚರ್ಯದಿಂದ ಕೇಳಿದಳು.

‘ಹೌದು ಋತು ನಾನೇ, ನನ್ನನ್ನು ಇಲ್ಲಿ ನೋಡಿ ನಿಂಗೆ ತುಂಬಾ ಆಶ್ಚರ್ಯ ಆಗ್ತಿರಬಹುದಲ್ವಾ, ಆದ್ರೆ ನಿನ್ನನ್ನು ಇಲ್ಲಿ ನೋಡಿ ನಂಗೇನೂ ಆಶ್ಚರ್ಯ ಆಗ್ತಿಲ್ಲ, ಯಾಕೆ ಗೊತ್ತಾ?....ನಿನ್ನನ್ನು ಇಲ್ಲಿಗೆ ತಂದು ಹಾಕಿದ್ದು ನಾನೇ..’

ಪುರುಷೋತ್ತಮರ ಏರುಪೇರಿಲ್ಲದ ಸಮಾಧಾನದ ಮಾತುಗಳಿಂದ ಋತು ಬೆಚ್ಚಿದಳು....ಇದು ಪಪ್ಪನ ಕೆಲಸವೇ? ನಂಬಲಾಗದವಳಂತೆ ಅವರತ್ತಲೇ ನೋಡತೊಡಗಿದಳು.

(ಸಶೇಷ)

---

# ಹೊಸ ಧಾರಾವಾಹಿ



**ಹೆಸರಾಂತ ಕಥೆಗಾರ**
**ಟಿ. ತಿಮ್ಮಪ್ಪ ಅವರ**

# ಪ್ರೀತಿ ಪ್ರೇಮ ಡ್ರಾಮ

ಅನುಪಮ ಸುಂದರಿ ಹೇಮಾವತಿ ಮನಸಾರೆ ಪ್ರೀತಿಸಿದ್ದು ಸುನಿಲ್ ಕುಮಾರನನ್ನು. ಆದರೆ ಆತನೇಕೆ ಆಕೆಯ ಪ್ರೀತಿಯನ್ನು ಮನ್ನಿಸಲಿಲ್ಲ? ಹೇಮಾವತಿಯನ್ನು ಮನಸ್ಸಿನೊಳಗೇ ಆರಾಧಿಸಿದ ಗಿರಿಧರ್ ತನ್ನ ಪ್ರೀತಿಯನ್ನು ಮನಸ್ಸು ಬಿಚ್ಚಿ ಹೇಳಲೇ ಇಲ್ಲ. ಭಗ್ನಪ್ರೇಮಿಯಾದ ಗಿರಿಧರ್ ಕೊನೆಗೆ ಯಾರನ್ನು ಮದುವೆಯಾದ? ಹೇಮಾವತಿ ಏನಾದಳು? ಪ್ರೀತಿ ಪ್ರೇಮಗಳ ಭ್ರಮಾಧೀನ ಲೋಕದಲ್ಲಿ ಯಾವ ಹೂವು ಯಾವ ಮುಡಿಗೆ? ಒಂದು ವಿಭಿನ್ನ ಪ್ರೇಮ ಕಥಾನಕ.

**ಶೀಘ್ರ ಆರಂಭ**